ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ ಜಿಲ್ಲೆ, ಯಾದಗಿರಿ – 585-202

ದೂರವಾಣಿ : 08473-253700, 253702 ಫ್ಯಾಕ್ಸ್: 08473-253701 Email: dcydg123@gmail.com

ಸಂ.ಕಂ/ಮಜಿ/ನೀತಿ ಆಯೋಗ/ 06 /2021-22 ದಿನಾಂಕ: 22/12/2022

## -::ಅಧಿಕೃತ ಜ್ಞಾಪನಾ ಪತ್ರ::-

ವಿಷಯ : ಮಹತ್ವಾಕಾಂಕ್ಷೆ ಜಿಲ್ಲೆಯಾದ ಯಾದಗಿರಿ ಜಿಲ್ಲೆಯಲ್ಲಿ CSR ರಡಿ Stem Learning ಅನುದಾನದಡಿ "Establishing Mini Science Center In 10 School Of Yadgiri District" ಯೋಜನೆಯ ಅನುಷ್ಠಾನ ಕುರಿತು.

ಉಲ್ಲೇಖ:
1. KPTCL letter No : ಕವಿಪ್ರನಿನಿ/ಕೆಸಿಒಬಿ9/41100/22-23 Dated : 03-09-2022.
2. Stem Learning Pvt.Ltd Banglore Letter Dated : 21-03-2022.

**ಪೀಠಿಕೆ:**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಯಾದಗಿರಿ ಜಿಲ್ಲೆಯು ಮಹತ್ವಾಕಾಂಕ್ಷೆ ಜಿಲ್ಲೆಯಾಗಿದ್ದು ಕರ್ನಾಟಕ ವಿದ್ಯುತ್ ಪ್ರಕರಣ ನಿಗಮ ನಿಯಮಿತ, ಕಂಪನಿಯ ಅಧಿಕೃತ ಕಛೇರಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು (CSR) ರಡಿ ಯಾದಗಿರಿ ಜಿಲ್ಲೆಯಲ್ಲಿನ ಶಾಲೆಗಳಲ್ಲಿ ಮಿನಿ ವಿಜ್ಞಾನ ಕೇಂದ್ರ ಅಳವಡಿಸುವ ಕುರಿತಂತೆ "Establishing Mini Science Center In 10 School Of Yadgiri District" ಯೋಜನೆಯನ್ನು LEARNING PRIVATE LIMITED ಸಂಸ್ಥೆಯ ಮೂಲಕ ಕೈಗೊಳ್ಳಲು ರೂ.53.33 ಲಕ್ಷ ಅನುದಾನವನ್ನು ಉಲ್ಲೇಖಿತ (1) ರನ್ವಯ ಒದಗಿಸಿರುತ್ತಾರೆ. ಸದರಿ ಅನುದಾನದಲ್ಲಿ ಯೋಜನೆಯ ಅನುಷ್ಠಾನಗೊಳಿಸಲು ಮೊದಲನೇ ಕಂತಿನ ಅನುದಾನ ಶೇ.50% ಮೊತ್ತ ರೂ.26.66 ಲಕ್ಷಗಳ ಬಿಡುಗಡೆಗೊಳಿಸಲು ಕುರಿತಂತೆ ಈ ಕೆಳಗಿನಂತೆ ವಿವರ

ಮುಂದುವರೆದು ಉಲ್ಲೇಖಿತ (2) ರನ್ವಯ STEM LEARNING PRIVATE LIMITED ಸಂಸ್ಥೆಯು "Establishing Mini Science Center In 10 School Of Yadgiri District" ಯೋಜನೆಯ ಯೋಜನಾ ವರದಿ ಸಲ್ಲಿಸುತ್ತಾ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮತಿ ನೀಡಲು ಕೋರಿರುತ್ತಾರೆ.

ಆದ್ದರಿಂದ ಯಾದಗಿರಿ ಜಿಲ್ಲೆಯ ಆಯ್ದ ಸರಕಾರಿ ಶಾಲೆಗಳಲ್ಲಿ "Establishing Mini Science Center In 10 School Of Yadgiri District" ಯೊಜನೆಯನ್ನು STEM LEARNING PRIVATE LIMITED ವತಿಯಿಂದ ಅನುಷ್ಠಾನಗೊಳಿಸುವುದು ಸೂಕ್ತವಿರುವದರಿಂದ ಈ ಕೆಳಗಿನಂತೆ ಆದೇಶ.

## :: ಆದೇಶ ::

ಸಂ/ಕಂ/ಮಜಿ/ನೀತಿ ಆಯೋಗ/ 06/2021-22 ದಿನಾಂಕ:22-12-2022

ಪೀಠಿಕೆಯಲ್ಲಿ ವಿವರಿಸಿದಂತೆ, ಯಾದಗಿರಿ ಜಿಲ್ಲೆಯು ಮಹತ್ವಾಕಾಂಕ್ಷೆ ಜಿಲ್ಲೆಯಾಗಿದ್ದು ಕರ್ನಾಟಕ ವಿದ್ಯುತ್ ಪ್ರಕರಣ ನಿಗಮ ನಿಯಮಿತ, ಕಂಪನಿಯ ಅಧಿಕೃತ ಕಛೇರಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು (CSR) ರಡಿ ಯಾದಗಿರಿ ಜಿಲ್ಲೆಯಲ್ಲಿ ಈ ಕೆಳಕಂಡ ಶಾಲೆಗಳಲ್ಲಿ ಮಿನಿ ವಿಜ್ಞಾನ ಕೇಂದ್ರ ಅಳವಡಿಸುವ ಕುರಿತಂತೆ "Establishing Mini Science Center In 10 School Of Yadgiri District" ಯೋಜನೆಯನ್ನು STEM LEARNING PRIVATE LIMITED ಸಂಸ್ಥೆ ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿ ಮೊದಲನೆ ಕಂತಿನ ಅನುದಾನ ಶೇ.50% ರಷ್ಟು ರೂ.26.66 ಲಕ್ಷಗಳನ್ನು ಯೋಜನಾ ಖಾತೆಯಿಂದ ಚೆಕ್ ಸಂಖ್ಯೆ : ಮೂಲಕ STEM LEARNING PRIVATE LIMITED ಸಂಸ್ಥೆಗೆ ಬಿಡುಗಡೆಗೊಳಿಸಿ ಆದೇಶಿಸಿದೆ

| ಕ್ರ.ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ತಾಲ್ಲೂಕಿನ ಹೆಸರು | Mini Science Center ಅಳವಡಿಸಬೇಕಾದ ಶಾಲೆಗಳ ಹೆಸರು | ಅನುಷ್ಠಾನಗೊಳಿಸುವ ಸಂಸ್ಥೆ | ಬಿಡುಗಡೆ ಮಾಡುತ್ತಿರುವ 1ನೇ ಕಂತಿನ ಅನುದಾನದ ಮೊತ್ತ | ನೋಡಲ್ ಅಧಿಕಾರಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | "Establishing Mini Science Center In 10 School Of Yadgiri District" | 53.33 | ಸುರಪುರ | ಸರಕಾರಿ.ಬಾಲಕಿಯರ ಪ್ರೌ.ಶಾಲೆ ಕೆಂಬಾವಿ | STEM LEARNING PRIVATE LIMITED | 26.66 | ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಯಾದಗಿರಿ |
| | | | ಸುರಪುರ | ಕರ್ನಾಟಕ ಪಬ್ಲಿಕ ಶಾಲೆ ರಂಗಂಪೇಟ್ | | | |
| | | | ಶಹಾಪುರ | ಸರಕಾರಿ.ಪ್ರೌ.ಶಾಲೆ ಚಾಮನಾಳ | | | |
| | | | ಶಹಾಪುರ | ಕರ್ನಾಟಕ ಪಬ್ಲಿಕ ಶಾಲೆ ಸಗರ | | | |
| | | | ವಡಿಗೇರಾ | ಸರಕಾರಿ.ಪ್ರೌ.ಶಾಲೆ ಬೆಂಡಬೆಂಬಳಿ | | | |
| | | | ಯಾದಗಿರಿ | ಸರಕಾರಿ.ಪ್ರೌ.ಶಾಲೆ ಅರಕೇರಾ.ಕೆ | | | |
| | | | ಯಾದಗಿರಿ | ಸ.ಪ್ರೌ.ಶಾಲೆ ಸ್ಟೇಷನ್ ಬಜಾರ್ ಯಾದಗಿರಿ | | | |
| | | | ಹುಣಸಗಿ | ಆದರ್ಶ ವಿದ್ಯಾಲಯ ವಜ್ಜಲ | | | |
| | | | ಗುರುಮಿಠಕಲ್ | ಸ.ಪ್ರೌ.ಶಾಲೆ ಸೈದಾಪುರ ಗ್ರಾಮ | | | |
| | | | ಗುರುಮಿಠಕಲ್ | ಸ.ಪ್ರೌ.ಶಾಲೆ ಯಲ್ಹೇರಿ | | | |

**ಷರತ್ತುಗಳು:**

1. ಉಲ್ಲೇಖಿತ (1) ರಲ್ಲಿ ನಮೂದಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2. ಸದರಿ ಯೋಜನೆಯನ್ನು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಯಾದಗಿರಿ ಇವರ ಮೇಲ್ವಿಚಾರಣೆಯಲ್ಲಿ ಅನುಷ್ಠಾನಗೊಳಿಸತಕ್ಕದ್ದು
3. ಯೋಜನಾ ವರದಿಯಲ್ಲಿರುವ ಯೋಜನೆಗೆ ಸಂಬಂದಿಸಿದ ಸಾಮಾಗ್ರಿಗಳನ್ನು ಪಾರದರ್ಶಕವಾಗಿ ಖರೀದಿಸಲು ಸೂಚಿಸಿದೆ ಹಾಗೂ ಸಾಮಾಗ್ರಿಗಳ ಖರೀದಿ, ತರಬೇತಿ ವೆಚ್ಚ ಇನ್ನಿತರ ಯೋಜನೆಯ ವೆಚ್ಚಗಳಲ್ಲಿ ಯಾವುದೇ ಲೋಪದೋಷವಾದಲ್ಲಿ ಅನುದಾನವನ್ನು ತಡೆಹಿಡಿಯಲಾಗವುದು.
4. ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆಗೊಳಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು
5. ಒಂದು ವೇಳೆ ಬಿಡುಗಡೆ ಮಾಡಲಾದ ಅನುದಾನ ದುರುಪಯೋಗವಾದಲ್ಲಿ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ನಿಯಮಾನುಸಾರ ಕ್ರಮ ಜರುಗಿಸಲಾಗುವುದು
6. ಉದ್ದೇಶಿತ ಯೋಜನೆಯ 2ನೇ ಕಂತಿನ ಅನುದಾನ ಪ್ರಸ್ತಾವನೆ ಸಲ್ಲಿಸುವಾಗ ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

   1) **ಹಣ ಬಳಕೆ ಪ್ರಮಾಣ ಪತ್ರ**
   2) **ಯೋಜನೆ ಪ್ರಗತಿ/ಪೂರ್ಣಗೊಂಡ ವರದಿ (GPS ಛಾಯಾ ಚಿತ್ರಗಳೊಂದಿಗೆ)**
   3) **ಯೋಜನೆ ಪೂರ್ಣಗೊಂಡ ಪ್ರಮಾಣ ಪತ್ರ. (3) ಸ್ಟಾಕ್ ರಜಿಸ್ಟರ್ (4) ಸಾಮಾಗ್ರಿಗಳ ಖರಿದಿ, ತರಬೇತಿ ವೆಚ್ಚದ ಇನ್ನಿತರ ಯೊಜನೆಯ ವೆಚ್ಚಗಳ ಬಿಲ್ ಪ್ರತಿಗಳನ್ನು (Invoice copy ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಯಾದಗಿರಿ ಇವರು ದೃಡಿಕರಿಸಿ ಸಲ್ಲಿಸುವುದು.**

7. ಉದ್ದೇಶಿತ ಯೋಜನೆಯನ್ನು ಅನುಮೋದನೆ ನೀಡಿದ ದಿನಾಂಕದಿಂದ ನಿಗದಿತ ಅವದಿಯೊಳಗೆ ಪೂರ್ಣಗೊಳಿಸುವುದು.

8. ಸದರಿ ಯೋಜನೆಯ ಬಗ್ಗೆ ಯಾವುದೇ ಕಾರಣಕ್ಕೂ ಪರಿಷ್ಕೃತ ಯೋಜನಾ ವರದಿಯನ್ನು ಪರಿಗಣಿಸಲಾಗುವುದಿಲ್ಲ.

9. ಸದರಿ ಯೋಜನೆಯು ಅನುಷ್ಠಾನ ಸಮಯದಲ್ಲಿ ಖರಿದೀಸಲಾದ ಸಾಮಗ್ರಿಗಳ ಮೇಲೆ NITI AYOG, ADP YADAGIRI ಮತ್ತು KPTCL Logo ವನ್ನು ಸ್ಪಷ್ಟವಾಗಿ ಕಾಣುವಂತೆ ಮುದ್ರಿಸಲು ಕ್ರಮವಹಿಸುವುದು.

10. ಯೋಜನೆಯ ಪ್ರಗತಿ ವರದಿಯನ್ನು ಕಾಲ ಕಾಲಕ್ಕೆ ಈ ಕಾರ್ಯಾಲಯಕ್ಕೆ ಹಾಗೂ KPTCL ಸಂಸ್ಥೆಗೆ ಸಲ್ಲಿಸತಕ್ಕದ್ದು. ಇನ್ನೂಳಿದಂತೆ ನೀತಿ ಆಯೋಗ ಹಾಗೂ ಈ ಕಚೇರಿಯಿಂದ ಕಾಲ ಕಾಲಕ್ಕೆ ಹೊರಡಿಸಲಾಗುವ ಎಲ್ಲಾ ಷರತ್ತುಗಳು ಅನ್ವಯವಾಗುತ್ತವೆ.

ಜಿಲ್ಲಾಧಿಕಾರಿಗಳು
ಯಾದಗಿರಿ

ಗೆ,

**STEM Learning Pvt. Ltd**
**1205, marathon Icon, Marathon Nextgen Campus,**
**Opp.G.K.Marg, Lower Pare(w), Mumbai-400013**

ಪ್ರತಿಯನ್ನು:

1. ಕರ್ಯದರ್ಶಿ, ಕರ್ನಾಟಕ ವಿದ್ಯುತ್ ಪ್ರಕರಣ ನಿಗಮ ನಿಯಮಿತ, ಕಂಪನಿಯ ಅಧಿಕೃತ ಕಛೇರಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ
2. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಯಾದಗಿರಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಶ್ರೀ ವಿಶಾಲ ಪಾಟೀಲ ಜಿಲ್ಲಾ ಕೋಶ ಯಾದಗಿರಿ ರವರಿಗೆ ನೀಡುತ್ತಾ ಸದರಿ ಯೋಜನೆಯ ಸಂಬಂದಿಸಿದಂತೆ KPTCL ಹಾಗೂ STEM LEARNING PRIVATE LIMITED ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು ಹಾಗೂ ಯೋಜನೆಯ ಪ್ರಗತಿ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಿದೆ.
4. ಕಚೇರಿ ಕಡತಕ್ಕೆ

# ಉಪನಿರ್ದೇಶಕರು ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ, ಯಾದಗಿರಿ

## ಯಾದಗಿರಿ ಜಿಲ್ಲೆಯಲ್ಲಿ ಮಿನಿ ವಿಜ್ಞಾನ ಕೇಂದ್ರ ಸ್ಥಾಪಿಸಲು ಪ್ರೌಢ ಶಾಲೆಗಳ ಪ್ರಸ್ತಾವನೆ

| ಕ್ರಸಂ | ತಾಲ್ಲೂಕಿನ ಹೆಸರು | ಪ್ರೌಢ ಶಾಲೆಯ ಹೆಸರು | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಕೊಠಡಿ ಮತ್ತು ವಿದ್ಯುತ್ ಸೌಲಭ್ಯ ಹೊಂದಿದೆಯೇ | ಷರಾ |
|---|---|---|---|---|---|
| 1 | ಸುರಪುರ | ಸ.ಬಾಲಕಿಯರ ಪ್ರೌ.ಶಾಲೆ ಕೆಂಬಾವಿ | 555 | ಹೊಂದಿದೆ | |
| 2 | ಸುರಪುರ | ಕರ್ನಾಟಕ ಪಬ್ಲಿಕ ಶಾಲೆ ರಂಗಂಪೇಟ್ | 1290 | ಹೊಂದಿದೆ | |
| 3 | ಶಹಾಪುರ | ಸ.ಪ್ರೌ.ಶಾಲೆ ಚಾಮನಾಳ | 469 | ಹೊಂದಿದೆ | |
| 4 | ಶಹಾಪುರ | ಕರ್ನಾಟಕ ಪಬ್ಲಿಕ ಶಾಲೆ ಸಗರ | 911 | ಹೊಂದಿದೆ | |
| 5 | ವಡಿಗೇರಾ | ಸ.ಪ್ರೌ.ಶಾಲೆ ಬೆಂಡೆಬೆಂಬಳಿ | 432 | ಹೊಂದಿದೆ | |
| 6 | ಯಾದಗಿರಿ | ಸ.ಪ್ರೌ.ಶಾಲೆ ಅರೆಕೇರಾ.ಕೆ | 757 | ಹೊಂದಿದೆ | |
| 7 | ಯಾದಗಿರಿ | ಸ.ಪ್ರೌ.ಶಾಲೆ ಸ್ಟೇಷನ್ ಬಜಾರ್ ಯಾದಗಿರಿ | 555 | ಹೊಂದಿದೆ | |
| 8 | ಹುಣಸಗಿ | ಆದರ್ಶ ವಿದ್ಯಾಲಯ ವಜ್ಜಲ | 302 | ಹೊಂದಿದೆ | |
| 9 | ಗುರುಮಿಠಕಲ್ | ಸ.ಪ್ರೌ.ಶಾಲೆ ಸೈದಾಪುರ ಗ್ರಾಮ | 374 | ಹೊಂದಿದೆ | |
| 10 | ಗುರುಮಿಠಕಲ್ | ಸ.ಪ್ರೌ.ಶಾಲೆ ಯಲ್ಹೇರಿ | 279 | ಹೊಂದಿದೆ | |

ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಯಾದಗಿರಿ